SC 1/2021
PW.11

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ.11**

**ಚಾ.ಸಾ.21**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಾನಂದ |
| ತಂದೆಯ ಹೆಸರು | - | ಅಣ್ಣಪ್ಪ ಪೂಜಾರಿ |
| ವಯಸ್ಸು | - | 37 ವರ್ಷ |
| ಉದ್ಯೋಗ | - | ಪೋಲಿಸ್ ಪೇದೆ |
| ವಿಳಾಸ | - | ಉಪಾಧೀಕ್ಷಕರ ಕಚೇರಿ, ಕಾರ್ಕಳ |

ದಿನಾಂಕಃ 22-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2020 ನೇ ಇಸವಿಯಿಂದ 2022 ರವರೆಗೆ ಡಿ ಸಿ ಐ ಬಿ ಕಚೇರಿ ಉಡುಪಿ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 13-02-2020 ರಂದು ಈ ಪ್ರಕರಣದ ತನಿಖಾಧಿಕಾರಿ ನನ್ನನ್ನು ಹಾಗೂ ಇತರ ಸಿಬ್ಬಂದಿಗಳಾದ ಚಾಸಾ16 ರಿಂದ 20 ರವರನ್ನು ಆರೋಪಿತರ ಪತ್ತೆಗಾಗಿ ನೇಮಿಸಿದ್ದು ಆರೋಪಿತರ ಮೊಬೈಲ್ ಲೊಕೇಶನ್ ಪರಿಶೀಲಿಸಿದಾಗ ಬೆಳಗಾವಿ ಕಡೆಗೆ ಹೋಗಿರುವುದು ತಿಳಿದು ಬಂದಿದ್ದು ಆರೋಪಿತರ ಭಾವ ಚಿತ್ರವನ್ನು ಹಾಗೂ ಚಹರೆ, ವಿಳಾಸವನ್ನು ಪಡೆದುಕೊಂಡು ಖಾಸಗಿ ವಾಹನದಲ್ಲಿ ಅದೇ ದಿನ ಹೊರಟು ಮರುದಿನ ಗೋಕಾಕ್ ಮತ್ತು ಘಟಪ್ರಭಾ ಕಡೆಗಳಲ್ಲಿನ ಬಸ್ಸು ನಿಲ್ದಾಣ, ರೈಲ್ವೆ ನಿಲ್ದಾಣ ಸಂಚರಿಸಿ ಆರೋಪಿತರ ಪತ್ತೆಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಆರೋಪಿತರ ಮೊಬೈಲ್ ಪೋನ್ ಗಳು ಸ್ವಿಚ್ ಆನ್ ಮತ್ತು ಸ್ವಿಚ್ ಆಫ್ ಆಗುತ್ತಿದ್ದು ನಿರ್ದಿಷ್ಟ ಸ್ಥಳದ ಮಾಹಿತಿ ದೊರೆಯದೇ ಇದ್ದ ಹಿನ್ನೆಲೆಯಲ್ಲಿ ಗೋಕಾಕ್ ನಲ್ಲಿ ಉಳಿದುಕೊಂಡು ಮರುದಿನ ದಿನಾಂಕ 15-02-2020 ರಂದು ಗೋಕಾಕ್ ಕಡೆ ಸಂಚರಿಸಿದಾಗ ಅವರ ಮಾಹಿತಿ ಲಭ್ಯವಾಗಿರುವುದಿಲ್ಲ. ದಿನಾಂಕ 16-02-2020 ಮತ್ತು 17-02-2020 ರಂದು ಸಹಾ ಮಾಹಿತಿ ದೊರೆತಿರುವುದಿಲ್ಲ. ದಿನಾಂಕ 18-02-2020 ರಂದು ಬೆಳಿಗ್ಗೆ

8-00 ಗಂಟೆಗೆ ನಾವು ಹುಬ್ಬಳ್ಳಿ ಕೆ ಎಸ್ ಆರ್ ಟಿ ಸಿ ಬಸ್ಸು ನಿಲ್ದಾಣಕ್ಕೆ ಬಂದಾಗ ಇಬ್ಬರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಇರುವುದನ್ನು ಕಂಡು ನಮ್ಮಲ್ಲಿರುವ ಛಾಯಾ ಚಿತ್ರವನ್ನು ನೋಡಿದಾಗ ಅವರ ಹೋಲಿಕೆಯಾಗುತ್ತಿದ್ದು ಕೂಡಲೇ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಅವರ ಹೆಸರು ಅಶೋಕ ಹಾಗೂ ಆನಂದ ಎಂದು ತಿಳಿಸಿದ್ದು ಈ ಕೃತ್ಯದ ಬಗ್ಗೆ ಒಪ್ಪಿಕೊಂಡಿದ್ದು ಅವರನ್ನು ವಶಕ್ಕೆ ಪಡೆದುಕೊಂಡು ಹುಬ್ಬಳ್ಳಿಯಿಂದ ಹೊರಟು ಅದೇ ದಿನ ರಾತ್ರಿ 7-00 ಗಂಟೆಗೆ ವೃತ್ತ ನಿರೀಕ್ಷಕರ ಸಮಕ್ಷಮ ಹಾಜರಾಗಿ ಒಂದು ವರದಿಯೊಂದಿಗೆ ಆರೋಪಿಯುನ್ನು ಹಾಜರು ಪಡಿಸಿರುತ್ತೇವೆ. ಸದ್ರಿ ವರದಿಗೆ ಚಾಸಾ16 ಇವರು ಸಹಿ ಮಾಡಿರುತ್ತಾರೆ. ವರದಿ ನಿಪಿ.33 ಎಂದು ಗುರುತಿಸಲಾಯಿತು. ನಂತರ ತನಿಖಾಧಿಕಾರಿ ನಮ್ಮ ಸಮಕ್ಷಮ ಆರೋಪಿತರನ್ನು ವಿಚಾರಣೆ ಮಾಡಿ, ಅಂಗಜಪ್ತಿ ಮಾಡಿ ಅವರ ಬಳಿ ಇದ್ದ ಎರಡು ಮೊಬೈಲ್ ಫೋನ್ ಗಳನ್ನು ಅಮಾನತ್ತುಪಡಿಸಿಕೊಂಡು ದಸ್ತಗಿರಿ ಮಹಜರು ತಯಾರಿಸಿರುತ್ತಾರೆ. ಮಹಜರನ್ನು ಈಗಾಗಲೇ ನಿಪಿ.16 ಎಂದು ಗುರುತಿಸ ಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು. ಮೊಬೈಲ್ ಫೋನ್ ಗಳನ್ನು ಈಗಾಗಲೇ ಮುದ್ದೆಮಾಲು-5 ಮತ್ತು 6 ಎಂದು ಗುರುತಿಸಲಾಗಿದೆ. ಒಂದನೇ ಆರೋಪಿಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುತ್ತಿದ್ದು ಆತನೇ ಒಂದನೇ ಆರೋಪಿ ಎಂದು ಗುರುತಿಸಿದ್ದೇನೆ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಪಿ.ಎನ್. ವಕೀಲರಿಂದಃ</u>**

ಪೋಲಿಸ್ ಸಿಬ್ಬಂದಿಗಳು ಮಾತ್ರ ಆರೋಪಿಯ ತಲಾಶೆಗಾಗಿ ಹೋಗಿರುತ್ತೇವೆ. ಒಟ್ಟು ಐದು ದಿನ ಆರೋಪಿತರ ಹುಡುಕಾಟದಲ್ಲಿ ಇದ್ದೆವು. ನಾನು ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ. ಬಸ್ಸು ನಿಲ್ದಾಣ ಸಾರ್ವಜನಿಕ ಸ್ಥಳವಾಗಿದ್ದು ಸಾಕಷ್ಟು ಜನ ಸಂಚಾರ ಇತ್ತು. ಬಸ್ಸು ನಿಲ್ದಾಣದಲ್ಲಿ ಎ.ಎಸ್.ಐ. ರವರು ದಾಖಲಾತಿಗಳನ್ನು ಮಾಡಿದ್ದಾರೆ. ಸ್ಥಳೀಯರು ಎಷ್ಟು ಜನ ಸಹಿ ಹಾಕಿದ್ದಾರೆ ಎಂದು ನೆನಪಿಲ್ಲ. ಬೆಳಿಗ್ಗೆ ಸುಮಾರು 9-00 ಗಂಟೆಗೆ ಹುಬ್ಬಳ್ಳಿ ಬಸ್ಸು ನಿಲ್ದಾಣವನ್ನು ಬಿಟ್ಟಿರುತ್ತೇವೆ. ಸಂಜೆ 7-00 ಗಂಟೆಗೆ ಉಡುಪಿ ತಲುಪಿರುತ್ತೇವೆ. ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪೋಲಿಸರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಸುಮಾರು ಹತ್ತು ನಿಮಿಷ ಕಚೇರಿಯಲ್ಲಿ ಇದ್ದೆವು. ನಾನು ಆರೋಪಿಯ ಪತ್ತೆ ಕಾರ್ಯದಲ್ಲಿ ಬಾಗಿಯಾದದ್ದೇ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಮೊಬೈಲ್ ಫೋನ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - </u>** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು  ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.